# ಆಹಾ ಸುದ್ದಿ!

★ ಸಸಿತೋಟ

ಇಂಗ್ಲೆಂಡ್‌ನಲ್ಲಿ ಪೇಂಟ್‌ಬಾಲ್ (ಎದುರಾಳಿಯ ಮುಖಕ್ಕೆ ಬಣ್ಣ ತುಂಬಿದ ಕ್ಯಾಪ್ಸೂಲ್ ಅನ್ನು ಹೊಡೆಯುವ ಆಟ) ಕಂಪೆನಿಯೊಂದು ತನ್ನ ಉತ್ಪನ್ನವನ್ನು ಪರೀಕ್ಷಿಸಲು ಉದ್ಯೋಗಿಯನ್ನು ನೇಮಿಸಿಕೊಳ್ಳುವ ಸಲುವಾಗಿ ಅರ್ಜಿ ಕರೆದಿತ್ತು. ಇದಕ್ಕೆ ಭಾರತ ಸೇರಿದಂತೆ ವಿವಿಧ ದೇಶಗಳಿಂದ 10 ಸಾವಿರಕ್ಕಿಂತ ಅಧಿಕ ಅರ್ಜಿಗಳು ಬಂದಿವೆಯಂತೆ.  ಮುಖಕ್ಕೆ ಬಣ್ಣದ ಮುದ್ದೆ ಹೊಡೆಸಿಕೊಳ್ಳಲು ಎಷ್ಟೊಂದು ಜನ ಸಿದ್ಧರಿದ್ದಾರಲ್ಲ!



ಈಕ್ವೆಡಾರ್‌ನ ಕ್ವಿಟೋದಲ್ಲಿ ಹೊಸ ವರ್ಷದ ಆರಂಭದ ದಿನ ಹುಚ್ಚು ವಿಧವೆ ಎಂಬ ವೇಷ ಧರಿಸಿ ಹಿಂದಿನ ವರ್ಷದ ಸಾಲ ಬಾಕಿ ತೀರಿಸಲು ಹಣ ಬೇಡುವ ನಾಟಕ ನಡೆಯುತ್ತದೆ. ಹೊಟ್ಟೆಪಾಡಿಗೋ, ಹಣ ಗಳಿಕೆಗೋ ಬಹುಕೃತ ವೇಷಗಳು ಇಲ್ಲೂ ನಡೆಯುತ್ತವೆ, ವ್ಯತ್ಯಾಸ ಇಷ್ಟೆ- ಅಲ್ಲಿ ವರ್ಷಕ್ಕೆ ಒಂದು ದಿನವಾದರೆ, ಇಲ್ಲಿ ಪ್ರತಿ ದಿನ.



ಟೋಕಿಯೋದಲ್ಲಿ ಹೊಸ ವರ್ಷದ ಮೊದಲ ದಿನ ಲಂಗೋಟಿ ತೊಟ್ಟ ಪುರುಷರು ಕಡಲಿಗೆ ತೆರಳಿ ಸಂಪತ್ತಿಗಾಗಿ ಬೇಡಿಕೊಳ್ಳುತ್ತಾರಂತೆ. ತುಂಡುಡುಪು ತೊಟ್ಟ ಯುವತಿಯರು ಕ್ಲಬ್‌ನಲ್ಲಿ ಹಾಡಿ- ಕುಣಿದು ಸಂಪತ್ತು ಗಳಿಸುತ್ತಾರಲ್ಲ!



ಮ್ಯಾಡ್ರಿಡ್‌ನಲ್ಲಿ ಪ್ರತಿ ವರ್ಷಾಂತ್ಯದಲ್ಲಿ ಒಂದು ವಿಚಿತ್ರವಾದ ರೇಸ್ ನಡೆಯುತ್ತದೆ. ಜನ ತಾವೂ ಓಡುವುದಲ್ಲದೇ ತಮ್ಮ ಪ್ರೀತಿಯ ನಾಯಿಯನ್ನೂ ಓಡಿಸಿಕೊಂಡು ಹೋಗುತ್ತಾರೆ. ಅದೂ ಸ್ಪೇನ್ ಪಾರ್ಲಿಮೆಂಟ್ ಎದುರಿಗೆ. ಇದೇನು ಮಹಾ, ಇಲ್ಲಿ ಕನ್ನಡದ ಹುಟ್ಟು ಹೋರಾಟಗಾರರು ವಿಧಾನಸೌಧದ ಎದುರು ಎಲ್ಲಾ ಬಗೆಯ ನಾಲ್ಕು ಕಾಲಿನ ಪ್ರಾಣಿಗಳನ್ನೂ ಓಡಿಸಿಲ್ಲವೇ!

ಇಂಗ್ಲೆಂಡ್‌ನಲ್ಲಿ ವ್ಯಕ್ತಿಯೊಬ್ಬ ತಾನು ಸಾಕಿದ ಮೀನಿನ ಮಲಬದ್ಧತೆ ಸಮಸ್ಯೆ ನಿವಾರಿಸಲು 500 ಡಾಲರ್ ಖರ್ಚು ಮಾಡಿದ್ದಾನಂತೆ. ಸಾಮಾನ್ಯ ಮೀನಿನ ಮೇಲೆ 500 ಡಾಲರ್‌ಗೆ ಶಸ್ತ್ರಚಿಕಿತ್ಸೆ ನಡೆಸಿದ ವೈದ್ಯರೇ ಟೀವಿಯಲ್ಲಿ ಹೇಳಿಕೊಂಡು ಬಿದ್ದು ಬಿದ್ದು ನಕ್ಕಿದ್ದಾರಂತೆ. ಆದರೆ ಸಾಕಿದ ವ್ಯಕ್ತಿ ಮಾತ್ರ ಹೊಟ್ಟೆ ಸೇರಬೇಕಾಗಿದ್ದ ಮೀನಿನ ಆಯಸ್ಸನ್ನು ಹೆಚ್ಚಿಸಿ ಧನ್ಯತೆ ಅನುಭವಿಸುತ್ತಿರಬಹುದು.



ಅಮೆರಿಕದ ಖ್ಯಾತ ರಾಕ್ ಅ್ಯಂಡ್ ರೋಲ್ ಕಲಾವಿದನಾಗಿದ್ದ ದಿವಂಗತ ಎಲ್ವಿಸ್ ಪ್ರಿಸ್ಲೆಯ ಖಾಸಗಿ ವಿಮಾನವಿದು. ಐಷಾರಾಮಿ ಒಳಾಂಗಣವಿರುವ ಈ ವಿಮಾನ 10 ದಶಲಕ್ಷ ಡಾಲರ್‌ಗೆ ಹರಾಜಾಗುವ ನಿರೀಕ್ಷೆಯಿದೆಯಂತೆ. ಹರಾಜಾದ ನಂತರ ವಿಮಾನದ ಚಿಕ್ಕದೊಂದು ಚೂರನ್ನು ಸ್ಮರಣಿಕೆಯನ್ನಾಗಿ ಇಟ್ಟುಕೊಳ್ಳುತ್ತಾರಂತೆ, 10 ದಶಲಕ್ಷ ಡಾಲರ್ ಖರ್ಚು ಮಾಡಿದ್ದಕ್ಕೆ..!